ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಗ್ಗಾಂವ.

ಸಿ.ಸಿ ನಂ. 51ಃ2017

ಪಿಡಬ್ಲುಃ 4, ಸಿಡಬ್ಲುಃ 6

ಸಾಕ್ಷಿದಾರರ ಹೆಸರು : ಚಂದ್ರಶೇಖರ ಪಟೇಲ್ ತಂದೆ ಕೆಂಚೆಗೌಡ

ವಯಸ್ಸು : 38 ವರ್ಷಗಳು

ಉದ್ಯೋಗ : ಖಾಸಗಿ ಕೆಲಸ

ವಾಸಸ್ಥಳ : ಶಿಗ್ಗಾಂವ.

ದಿನಾಂಕಃ 25.07.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಎಪಿಪಿಯವರಿಂದ

ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ ಆಪಾದಿತರ ಪರಿಚಯ ಇರುತ್ತದೆ. ಈ ಪ್ರಕಾರಣದಲ್ಲಿ ಮೃತರಾದ ದೇವಾಜಿಯವರ ಪರಿಚಯ ಇರುತ್ತದೆ. ಮೈಸೂರಿನಿಂದ ನಾನು,
ಮೃತ ದೇವರಾಜಗೌಡ, ಚಾಸಾ 1, ಚಾಸಾ 7 ಹಾಗೂ ಆಪಾದಿತರು ಸೇರಿ ಇನ್ನೋವಾ ಗಾಡಿಯಲ್ಲಿ ದಿಃ 11.05.2016 ರಂದು ಹೊರಟು ಬೆಳಗಾವಿಗೆ ದಿಃ 12.05.2016 ರಂದು ತಲುಪಿ, ದಿಃ 13.05.2016 ರಂದು ಬೆಳಗಿನ ಜಾವಾ 6 ವರೆ ಸಮಯದಲ್ಲಿ ನಾನು ವಾಹನದ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದೆ. ಚಾಸಾ 9 ರವರು ನಿದ್ದೆ ಮಾಡುತ್ತಿದ್ದರು. ಮೃತ ವ್ಯಕ್ತಿಯಾದ ದೇವರಾಜ ಎನ್ನುವವರು ಆ ದಿನ ಚಾಲಕರು ಆಗಿದ್ದರು. ನಾವು ಪ್ರಯಾಣಿಸುತ್ತಿದ್ದ ವಾಹನ ಶಿಗ್ಗಾಂವ ಹತ್ತಿರ ಬಂದಾಗ ವಾಹನದಲ್ಲಿ ಶಬ್ದ ಕೇಳಿತು. ನಾವು ಎದ್ದ ನಂತರ ಗಾಡಿಯಿಂದ ಕೆಳೆಗೆ ದೇವರಾಜ ಎನ್ನುವವರು ಬಿದಿದ್ದರು. ನನಗೆ ಹಾಗೂ ಆಪಾದಿತರಿಗೆ ಸಣ್ಣಪುಟ್ಟ ಗಾಯಗಾಳಾಗಿದ್ದವು. ದೇವರಾಜ ಇವರು ಗಾಡಿಯಿಂದ ಕೆಳಗೆ ಬಿದ್ದಿದ್ದರು. ಅವರಿಗೆ ರಕ್ತ ಬರುತ್ತಿತ್ತು, ಆಗ ತುರ್ತುಚಿಕಿತ್ಸಾ ವಾಹನ ಕರೆಯಲಾಗಿ ಆದರೆ ಅವರು ಸ್ಥಳದಲ್ಲಿ ಮೃತಪಟ್ಟರು. ಪೋಲೀಸರಿಗೆ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಕೊಟ್ಟಿದ್ದೆ. ವಾಹನ ಸಂಪೂರ್ಣ ಜಖಂ ಆಗಿತ್ತು, ವಾಹನದ 3 ಚಕ್ರಗಳು ಸೋಟ್ಟಗೊಂಡಿರುತ್ತವೆ. ತನಿಖಾಧಿಕಾರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ಉಳಿದಂತೆ ಘಟನೆಯ ಬಗ್ಗೆ ಇತರೇ ವಿಚಾರಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ವಿನಂತಿಸಿಕೊಂಡಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಎಪಿಪಿಯವರಿಂದ

ನಾನು ಕೊಟ್ಟ ಹೇಳಿಕೆಯಲ್ಲಿ ಮರುದಿನವಸ ದಿಃ 13.05.2016 ರಂದು ನಾವು ಮೈಸೂರಿಗೆ ಬರುವಾಗ ಬೆಳಗಿನ ಜಾವ ಆಪಾದಿತರು ಗಾಡಿಯನ್ನು ಚಲಾಯಿಸುತ್ತಿದ್ದಾಗ ಬೆಳಿಗ್ಗೆ 6.30 ಗಂಟೆಗೆ ಒಮ್ಮೆಲೇ ನನ್ನ ಗಾಡಿ ದಡ್ ಅಂತಾ ಶಬ್ಬವಾದಾಗ ಎಚ್ಚರವಾಗಿದ್ದು ಕಾರು ನಡೆಸುತ್ತಿದ್ದ ದೀಪಕಕುಮಾರ ಇತನು ಗಾಡಿಯನ್ನು ಅತೀಜೋರಾಗಿ ಹಾಗೂ ತಾತ್ಸಾರತನದಿಂದ ಅತ್ತಿತ್ತ ರಸ್ತೆಯಲ್ಲಿ ಹೊರಳಾಡಿಸುತ್ತಿದ್ದ ನೋಡ ನೋಡುತ್ತಿದ್ದಂತೆ ಡಿವೈಡರ್ ಕಡೆಗೆ ಹಾವೇರಿ ಕಡೆಯಿಂದ ಬೆಳಗಾಂವ ಕಡೆ ಹೋಗುವ ರಸ್ತೆಯಲ್ಲಿ ಗಾಡಿ ಪಲ್ಟಿಯಾಗಿ ಬಿದ್ದಿತ್ತು ಎಂದರೆ ಸರಿ. ಆದರೆ ಮೃತ ದೇವರಾಜ ಇತನು ಮುಂದಿನ

ಸೀಟಿನಲ್ಲಿ ಕುಳಿತಿದ್ದು ಮುಂದಿನ ಡೋರ್ ಓಪನ್ ಆಗಿದ್ದರಿಂದ ಕಾರ ಪಲ್ಟಿಯಾಗಿದ್ದು ದೇವರಾಜ ಇವರಿಗೆ ತಲೆ ಹಚ್ಚಿ ರಸ್ತೆ ಮೇಲೆ ಬಿದ್ದರು ಎಂದರೆ ಸರಿ. ದೇವರಾಜ ಹಾಗೂ ಆಪಾದಿತರು ಸೀಟ್ ಬೆಲ್ಟ ಹಾಕಿದ್ದ ವಿಚಾರವನ್ನು ನಾನು ಗಮನಿಸಿಲ್ಲ. ಈ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u>- ಆರೋಪಿ ಪರ ವಕೀಲರಿಂದ

ನಾನು ಕೊಟ್ಟ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಹಿಯನ್ನು ಮಾತ್ರ ಮಾಡಿದ್ದೆ. ದೇವರಾಜ ಎನ್ನುವವರು ಅ ದಿನ ಗಾಡಿಯನ್ನು ಚಲಾಯಿಸುತ್ತಿದ್ದರು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಜೆ ಎಂ ಎಫ್ ಸಿ, ಶಿಗ್ಗಾಂವ.